# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 28.09.2011**

## ***ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರ ಮನೆ ಎದುರುಗಡೆ ತಮಟೆ ಬಾರಿಸುವ ಕಾರ್ಯಕ್ರಮ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆಸ್ತಿ ತೆರಿಗೆ ಬಾಕಿ ಇರುವ ತೆರಿಗೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ವಸೂಲಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿದ್ದಲ್ಲಿ ಜಪ್ತಿ ವಾರಂಟ್‌ಗಳನ್ನು ಜಾರಿ ಮಾಡಿ ತೆರಿಗೆ ವಸೂಲಿ ಮಾಡಲು ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರುಗಳಿಗೆ ಆದೇಶಿಸಿರುತ್ತಾರೆ.

1) ಇಂದು ತಮಟೆ ಹೊಡೆಯುವ ಕಾರ್ಯಕ್ರಮವನ್ನು ಮುಂದುವರೆಸಿ, ಮಹದೇವಪುರ ವಲಯ ವ್ಯಾಪ್ತಿಯಲ್ಲಿನ ಹೂಡಿ ಉಪ ವಿಭಾಗದ ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶದ ನಂ.9/10 ರಲ್ಲಿನ ಮೆ॥ ಜೈಕೋ ಆಟೋ ಮೊಬೈಲ್ ಇಂಜಿನಿಯರಿಂಗ್ ಕಂಪನಿ (ಪ್ರೈ). ಲಿ ರವರು ಕಟ್ಟಡದ ಆಸ್ತಿ ತೆರಿಗೆಯನ್ನು 2008-09ನೇ ಸಾಲಿನಿಂದ ಈವರೆಗೆ ರೂ.37,31,320/- ಮತ್ತು ಬಡ್ಡಿಯೊಂದಿಗೆ ಬಾಕಿ ಉಳಿಸಿಕೊಂಡಿದ್ದು, ಈ ಬಗ್ಗೆ ನೋಟಿಸನ್ನು ಜಾರಿ ಮಾಡಿದ್ದರೂ ಸಹ ಆಸ್ತಿ ತೆರಿಗೆ ಪಾವತಿಸದೇ ಇರುವುದರಿಂದ ದಿನಾಂಕ: 28.09.2011 ರಂದು ಕಂದಾಯ ಇಲಾಖೆಯ ಅಧಿಕಾರಿಗಳ ತಂಡ ಸದರಿ ಕಟ್ಟಡದ ಮುಂದೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಆಸ್ತಿಯ ಮಾಲೀಕರು ಇನ್ನು 3 ದಿನಗಳೊಳಗಾಗಿ ತೆರಿಗೆ ಪಾವತಿಸುವುದಾಗಿ ಪತ್ರದ ಮೂಲಕ ತಿಳಿಸಿರುತ್ತಾರೆ.

2) ಶ್ರೀ ಎಂ.ಎಂ.ಆರ್. ಶೆಟ್ಟಿ, ಆಸ್ತಿ ಸಂಖ್ಯೆ: 335/1, 2ನೇ ಮುಖ್ಯರಸ್ತೆ, ಮಲ್ಲೇಶ್ವರಂ ರವರು 2005-06 ರಿಂದ ಇದುವರೆಗೆ ರೂ.8.00 ಲಕ್ಷಗಳ ಆಸ್ತಿ ತೆರಿಗೆ ಮತ್ತು ರೂ.1.00 ಲಕ್ಷ ದಂಡ ಒಟ್ಟು ರೂ.9.00 ಲಕ್ಷಗಳ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದರಿಂದ ಇಂದು ಸದರಿ ಕಟ್ಟಡದ ಎದುರುಗಡೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸದರಿ ಮಾಲೀಕರು ರೂ.1.00 ಲಕ್ಷ ರೂ.ಗಳ ಚೆಕ್ಕನ್ನು ನೀಡಿ, ಉಳಿದ ರೂ.8.00 ಲಕ್ಷ ರೂ.ಗಳನ್ನು ನಾಳೆ ಪಾವತಿಸುವುದಾಗಿ ಲಿಖಿತ ರೂಪದಲ್ಲಿ ನೀಡಿದ್ದಾರೆ.

3) ಶ್ರೀ ಶಾಂತರಾವ್, ಆಸ್ತಿ ಸಂಖ್ಯೆ: 158 ಮತ್ತು 158/1, 8ನೇ ಮುಖ್ಯರಸ್ತೆ, ಮಲ್ಲೇಶ್ವರಂ ರವರು 2008-09 ರಿಂದ ಆಸ್ತಿ ತೆರಿಗೆ ಪಾವತಿಸದೇ ಬಡ್ಡಿ ಸಮೇತ ರೂ.12.00 ಲಕ್ಷ ರೂ.ಗಳ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದರು. ಆದ್ದರಿಂದ ಇಂದು ಸದರಿಯವರ ಮನೆ ಎದುರುಗಡೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸದರಿ ಮಾಲೀಕರು ಬೇರೆ ಊರಿನಲ್ಲಿರುವ ಕಾರಣ ಒಂದು ದಿನದ ಕಾಲಾವಕಾಶ ಕೋರಿ, ನಾಳೆ ಸಂಪೂರ್ಣ ಆಸ್ತಿ ತೆರಿಗೆ ಪಾವತಿಸುವುದಾಗಿ ಕೋರಿರುತ್ತಾರೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಜಪ್ತಿ ವಾರಂಟ್ ಜಾರಿ ಮಾಡುವುದರ ಜೊತೆಗೆ ಅವರ ಮನೆ ಎದುರು ತಮಟೆ ಹೊಡೆಯುವ ಕಾರ್ಯ ಮುಂದುವರೆಸಲಾಗುವುದೆಂದು ಆಯುಕ್ತರು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**